**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಓ ಎಸ್ ನಂಃ 13/2020**

**ಪಿ ಡಬ್ಲ್ಯೂ/1**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ 11/03/2024.**

**ಪಾಟೀ ಸವಾಲುಃ ಶ್ರೀ ಸಿ ಎಮ್ ಕೆ ವಕೀಲರಿಂದ ಪ್ರತಿವಾದಿ ವಕೀಲರುಃ**

1. ಈ ದಾವೆಯನ್ನು ನಾನು ಮತ್ತು ನನ್ನ ಮಗಳು ದಾಖಲಿಸಿದ್ದೇವೆ. ಈ ದಾವೆಯನ್ನು ನಾವು ದಾವೆದ ಆಸ್ತಿಯಿಂದ ಲಲಿತಾ ಮತ್ತು ರವಿ ಇವರನ್ನು ಬಿಡಿಸಬೇಕು ಅಂತ ಹಾಕಿರುತ್ತೇವೆ. 1 ನೇ ಪ್ರತಿವಾದಿ ರವಿ ನನ್ನ ಮಗ. ದಾವಾ ಆಸ್ತಿ ನಂಬರ ನನಗೆ ಹೇಳಲು ಆಗುವುದಿಲ್ಲ. ದಾವಾ ಆಸ್ತಿ ಚಕ್ಕುಬಂದಿ ಹೇಳಲು ಆಗುವುದಿಲ್ಲ. ಈ ದಾವಾ ಆಸ್ತಿ ನಿಮಗೆ ಹೇಗೆ ಬಂತು ಎಂದರೆ ಸಾಕ್ಷಿ ಅದು ನಾನು ಸ್ವಂತ ಖರೀದಿ ಹಿಡಿದಿದ್ದು ಎಂದು ನುಡಿಯುತ್ತಾರೆ. ನಾನು ದಾವಾ ಆಸ್ತಿಯನ್ನು ಶಿವಪ್ಪ ಹಂಚಿನಾಳ ಇವರಿಂದ ಖರೀದಿಸಿರುತ್ತೇನೆ. ನಾನು ಯಾವ ತಾರೀಖನಂದು ದಾವಾ ಆಸ್ತಿಯನ್ನು ಖರೀದಿ ಹಿಡಿದೆ ಅಂತ ಹೇಳಲು ಆಗುವುದಿಲ್ಲ. ದಾವಾ ಆಸ್ತಿಯನ್ನು ಎಷ್ಟಕ್ಕೆ ಖರೀದಿ ಹಿಡಿದೆ ಅಂತ ನನಗೆ ಈಗ ನೆನೆಪು ಇಲ್ಲ.

2. ಖರೀದಿ ಹಣವನ್ನು ನಾನು ಶಿವಪ್ಪ ಇವರಿಗೆ ಉಪನೋಂದಣಾಧಿಕಾರಿ ಇವರ ಸಮಕ್ಷಮ ನೀಡಿರುತ್ತೇನೆ. ನಾನು ವ್ಯವಸಾಯ ಮಾಡುತ್ತೇನೆ. ನನಗೆ ನಮ್ಮ ಹಿರಿಯರಿಂದ ಬಂದ 9 ಎಕರೆ ಜಮೀನು ಇದೆ. ನನ್ನ ತಂದೆ ನನ್ನ ಲಗ್ನ ಆಗುವ ಮುನ್ನ ಕಾಲ ಆಗಿರುತ್ತಾರೆ. ದಾವಾ ಆಸ್ತಿಯನ್ನು ನನ್ನ ಲಗ್ನ ಆದ ನಂತರ ಖರೀದಿ ಹಿಡಿದಿರುತ್ತೇನೆ. ಹಿರಿಯರ ಆಸ್ತಿಯಾದ 9 ಎಕರೆ ಜಮೀನನ್ನು ನಾವು ವ್ಯವಸಾಯ ಮಾಡುತಿದ್ದೇವು. ನನ್ನ ತಂದೆ ತೀರಿಕೊಂಡ ನಂತರ

9 ಎಕರೆ ಜಮೀನನ್ನು ನಾನು ಸಾಗುವಳಿ ಮಾಡುತಿದ್ದು, ನಂತರ ನನ್ನ ಮಕ್ಕಳು ವಯಸ್ಸರಾದಾಗ ಅವರು ಸಹ ಮಾಡುತಿದ್ದಾರೆ ಎಂದು ನುಡಿಯುತ್ತಾರೆ. ನಾನು ದಾವಾ ಜಮೀನನ್ನು ಖರೀದಿಸಲು ನಮ್ಮ ಹಿರಿಯರಿಂದ ಬಂದ 9 ಎಕರೆ ಜಮೀನಿನ ಉಳುವೆಯಿಂದ ಬಂದ ಉತ್ಪನ್ನದಿಂದ ಖರೀದಿ ಹಿಡಿರುತ್ತೇನೆ ಎಂದರೆ ಸಾಕ್ಷಿ ನನ್ನ ಹೆಂಡತಿಯ ತಂದೆ ನನ್ನ ಹೆಂಡತಿಗೆ ಬಂಗಾರ ಕೊಟ್ಟಿದ್ದು ಅದನ್ನು ಮಾರಿ ಹಾಗೂ ಅವರು ರೊಕ್ಕ ಸಹ ಕೊಟ್ಟಿದ್ದು ಅದರಿಂದ ನಾನು ದಾವಾ ಜಮೀನನ್ನು ಖರೀದಿಸಿರುತ್ತೇನೆ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದಿನ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ನೀಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**Sd/**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ**